<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 218/2025**

| ಸಾಕ್ಷಿಯ ಹೆಸರು | ಶ್ರೀ. ಕೃಷ್ಣಮೂರ್ತಿ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಮುನಿರಾಮು | 7 | 7 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **02.06.2026.** | |
| ಉದ್ಯೋಗ | ಟೈಲರಿಂಗ್ | | |
| ವಾಸ ಸ್ಥಳ | ಹಗಲಕುಪ್ಪೆ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ನಿಶಾನೆ.ಪಿ. 9 ರ ನೋಟೀಸ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 9 (ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಶಾನೆ.ಪಿ. 2 ರ ಮಹಜರ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಬಿ) ಎಂದು ಗುರುತಿಸಲಾಯಿತು. ಸುಮಾರು 1 ½ ವರ್ಷಗಳ ಹಿಂದೆ ಪೊಲೀಸರು ಚಾಸಾ. 1 ರವರ ಮನೆಯ ಮುಂದೆ ಬಂದಿದ್ದು ರಸ್ತೆಯಲ್ಲಿ ಮಹಜರ್ ಮಾಡುತ್ತಿದ್ದರು. ಆ ಸಮಯದಲ್ಲಿ ಸದರಿ ಸಹಿಗಳನ್ನು ಪಡೆದುಕೊಂಡರು. ನಿಶಾನೆ.ಪಿ. 2 ರ ಒಕ್ಕಣೆ ಗೊತ್ತಿಲ್ಲ. ನಿಶಾನೆ.ಪಿ. 3 ರ ಫೋಟೋದಲ್ಲಿ ನಾನು ಇದ್ದೇನೆ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 26.02.2025 ರಂದು ಹಗಲಕುಪ್ಪೆ ಗ್ರಾಮದ ರಮೇಶ್ ಎನ್ನುವವರು ಮನೆಯ ಮುಂದೆ ಸೀಮೆಂಟ್ ರಸ್ತೆಯಲ್ಲಿ ಪಿರ್ಯಾದಿ ಆರೋಪಿ ತನ್ನ ಮೇಲೆ ಹಲ್ಲೆ ಮಾಡಿದ ಜಾಗ ಎಂದು ತೋರಿಸಿದ್ದು ಅಲ್ಲಿ ಪೊಲೀಸರು ಬೆಳಗ್ಗೆ 9.45 ರಿಂದ 10.15 ಗಂಟೆಯವರೆಗೆ ನಿಶಾನೆ.ಪಿ. 2 ರಂತೆ ನನ್ನ ಹಾಗೂ ಕೆಂಪರಾಮಯ್ಯ ರವರ ಸಮಕ್ಷಮ ಮಹಜರ್ ಮಾಡಿ ಓದಿ ಹೇಳಿ ನನ್ನ ಪಡೆದರು ಎಂದರೆ ಸರಿ

ಅಲ್ಲ. ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.